

ಲಲನೆಯರ ಬೆನ್ನಿನೆಡೆ ಹಾವಿನೊಲು ಜೋಲು ಜಡೆ
ಕಾಳಿಂದೆಯಂತಿಳಿದು ಕೊರಳೆಡೆಗೆ ಕವಲೊಡೆದು
ಅತ್ತಿತ್ತ ಹರಿದ ಜಡೆ!
ಚೇಳ್ಕೊಂಡಿಯಂಥ ಜಡೆ, ಮೋಟು ಜಡೆ
ಎಣ್ಣೆಕಾಣದೆ ಹೆಣೆದು ಹಿಣಿಲಾಗಿ ಹೆಣೆದ ಜಡೆ
ಬೆವರಿನಲಿ ಧೂಳಿನಲಿ ನೆನೆದಂಟಿಕೊಂಡಿರುವ
ಗಂಟು ಜಡೆ
ಅಕ್ಕತಂಗಿಯ ಮುಡಿಯ ಹಿಡಿದು ನಾನೆಳೆದಂಥ
ಮಲ್ಲಿಗೆಯ ಕಂಪು ಜಡೆ
ಕೇದಗೆಯ ಹೆಣೆದ ಜಡೆ
ಮಾತೃಮಮತಾ ವೃಕ್ಷ ಬಿಟ್ಟ ಬಿಳಲಿನಂತೆ
ಅರಳಿರುವ ತಾಯ ಜಡೆ!

ಜಿ.ಎಸ್. ಶಿವರುದ್ರಪ್ಪನವರ ‘ಜಡೆ’ ಕವಿತೆ ಹೆಣ್ಣಿನ ಕೇಶರಾಶಿಯಲ್ಲಿ ಬ್ರಹ್ಮಾಂಡವನ್ನೇ ಕಾಣಿಸುತ್ತದೆ. ‘ಗುರುಕುಲಜೀವಾಕರ್ಷಣ ಪರಿಣತ ಆ ಪಾಂಚಾಲಿಯ ಜಡೆ! ಸೀತೆಯ ಕಣ್ಣೀರೊಳು ಮಿಂದ ಜಡೆ, ಓಹೋ ಈ ಜಡೆಗೆಲ್ಲಿ ಕಡೆ!’ ಎನ್ನುವ ಅವರ ಬಣ್ಣನೆಯಲ್ಲಿ, ಇಡೀ ಜಗತ್ತೇ ಜಡೆಯ ಹೆಣಿಗೆಯಂತಿದೆ. ಇಂಥ ಜಡೆಗೆ ಕತ್ತರಿ ಹಾಕುವ ಸಂದರ್ಭ ಬಂದರೆ?

‘ಆ ಪುಟ್ಟ ಪೋರಿಯ ತಲೆಗೂದಲು ನೋಡಿ, ಎಷ್ಟು ಚೆನ್ನಾಗಿದೆ... ಮೊಣಕಾಲನ್ನೂ ಮೀರಿ ಬೆಳೀತಿದೆ. ಹನ್ನೆರಡು ವರ್ಷಕ್ಕೇ ಇಷ್ಟುದ್ದ ಕೇಶ, ಇನ್ನು ಮುಂದೆ ಇನ್ನೆಷ್ಟು ಬೆಳೆಯುವುದೋ...’ – ಉದ್ದ ಕೇಶದ ಹುಡುಗಿಯ ಬಗ್ಗೆ ಮನೆಯಂಗಳದಲ್ಲಿ ನಿಂತು ಹರಟೆ ಹೊಡೆಯುತ್ತಿದ್ದ ಹೆಂಗಳೆಯರು ನಡೆಸುತ್ತಿದ್ದ ಸಂಭಾಷಣೆ ಇದು. ಚಿಕ್ಕಂದಿನಿಂದಲೂ ಅಮ್ಮ ಎಣ್ಣೆ ಹಾಕಿ ಆರೈಕೆ ಮಾಡಿದ ಪ್ರತಿಫಲ ಸೊಂಪಾದ ನೀಳಗೂದಲು. ಕಪ್ಪು ಹೆರಳಿನ ಶ್ವೇತ ಚೆಲುವೆಗೆ ತನ್ನ ನೀಳ ಕೇಶರಾಶಿಯ ಬಗೆಗೆ ಅಪಾರ ಒಲವು. ಅದೊಂದು ದಿನ ಪತ್ರಿಕೆ ತಿರುವಿ ಹಾಕುತ್ತಿದ್ದಾಗ ಆ ನೀಳವೇಣಿಗೆ ಕಂಡದ್ದು, ಕ್ಯಾನ್ಸರ್‌ಪೀಡಿತ ಹೆಣ್ಣುಮಕ್ಕಳ ಪಡಿಪಾಟಲು. ಕ್ಯಾನ್ಸರ್ ಚಿಕಿತ್ಸೆಯ ಫಲವಾಗಿ ಬೆಂದು ಬೆಂಡಾಗಿದ್ದಲ್ಲದೆ, ತಲೆಗೂದಲು ಬರಿದಾಗಿ ಮುಜುಗರಕ್ಕೆ ಸಿಲುಕಿದ ಹೆಣ್ಣುಮಕ್ಕಳ ಕುರಿತ ವರದಿಯದು. ಇಂಥ ಮಹಿಳೆಯರಿಗೆ ವಿಗ್ ತಯಾರಿಸಲು ಕೇಶದಾನ ಮಾಡಬಹುದು ಎನ್ನುವುದು ಸುದ್ದಿಯಲ್ಲಿನ ಮುಖ್ಯಾಂಶ. ಅದನ್ನು ನೋಡಿದ ಕೂಡಲೇ ಹುಡುಗಿ ಮೊದಲು ಮಾಡಿದ ಕೆಲಸ, ಎಲ್ಲಿ ಕೇಶದಾನವನ್ನು ಸ್ವೀಕರಿಸುವರು ಎಂಬ ಮಾಹಿತಿಯ ಶೋಧ. ಮರುದಿನವೇ ತನ್ನ ನೀಳಕೇಶಕ್ಕೆ ಕತ್ತರಿ ಪ್ರಯೋಗ ಮಾಡಿಸಿಯೇ ಬಿಟ್ಟಳು. ಆ ಹುಡುಗಿಯ ಹೆಸರು ಹೃದ್ಯ, ಮಂಗಳೂರಿನ ಹೆಣ್ಣುಮಗಳು. ಆಕೆಯ ಕಳಕಳಿ, ಸಾಮಾಜಿಕ ತುಡಿತ, ಮಾನವೀಯತೆ ಅನುಕರಣೀಯ.

ದೇವರ ಮೇಲಿನ ಭಕ್ತಿಯಿಂದಲೋ ಹರಕೆಯ ಕಾರಣದಿಂದಲೋ ದೇವರಿಗೆ ಮುಡಿ ಒಪ್ಪಿಸುವವರಿದ್ದಾರೆ. ಆದರೆ, ಹೃದ್ಯಳಂತೆ ಉದಾತ್ತ ಕಾರಣಕ್ಕಾಗಿ ತಮ್ಮ ಕೂದಲು ನೀಡುವವರೂ ಇದ್ದಾರೆ.

‘ನೇತ್ರದಾನ ಮಹಾದಾನ’ ಎಂಬುದು ಸಾರ್ವತ್ರಿಕ ಘೋಷಣೆ. ಅಂಧರ ಬದುಕಿಗೆ ಬೆಳಕಾಗುವ ಈ ಘೋಷಣೆಯಿಂದ ಕಣ್ಣುದಾನದ ಬಗ್ಗೆ ಅರಿವು ಮೂಡುತ್ತದೆ. ಇದು ಕಣ್ಣುಗಳ ಮಾತಾಯಿತು. ದಾನಗಳ ಪಟ್ಟಿಯಲ್ಲೀಗ ತಲೆಗೂದಲೂ ಸೇರಿಕೊಂಡಿದೆ. ಕ್ಯಾನ್ಸರ್ ಚಿಕಿತ್ಸೆಯಿಂದ ರೋಗಿ ಗುಣಮುಖನಾದರೂ, ಚಿಕಿತ್ಸೆಯ ಅಡ್ಡಪರಿಣಾಮದ ಫಲವಾಗಿ ತಲೆಗೂದಲು ಬೋಳಾಗುತ್ತದೆ. ಇದನ್ನು ಅರಗಿಸಿಕೊಳ್ಳಲು ರೋಗಿಗೆ ಕಷ್ಟವಾಗುತ್ತದೆ. ಖಿನ್ನತೆ, ಕೀಳರಿಮೆ ಮುಂತಾದ ಮಾನಸಿಕ ವೇದನೆಯಿಂದ ಬಳಲಿ ಅದರಿಂದ ಹೊರಬರಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುತ್ತದೆ. ಅಂಥವರಿಗೆ ವಿಗ್ ವರದಂತೆ ಕಾಣಿಸುತ್ತದೆ. ಆದರೆ, ವಿಗ್ ತಯಾರಿಕೆಗೆ ಕೂದಲು ಬೇಕಲ್ಲ, ಅದರಲ್ಲೂ ಹೆಣ್ಣುಮಕ್ಕಳ ವಿಗ್‌ಗೆ ಉದ್ದನೆ ಕೂದಲು ಬೇಕು. ಆ ಅಗತ್ಯವನ್ನು ಪೂರೈಸುವ ನಿಟ್ಟಿನಲ್ಲಿ ರೂಪುಗೊಂಡಿರುವುದೇ ಕೇಶದಾನದ ಪರಿಕಲ್ಪನೆ.

## ನೀವೂ ಮಾಡಬಹುದು ಕೇಶದಾನ

ನೀಳವಾದ ಕೇಶ ಹೊಂದಬೇಕು ಎಂಬುದು ಯಾವ ಹೆಣ್ಣಿಗೆ ತಾನೆ ಇಷ್ಟವಿಲ್ಲ? ಸೊಂಪಾದ ತಲೆಗೂದಲು ಮಹಿಳೆಯರ ಸೌಂದರ್ಯಕ್ಕೆ ಭೂಷಣ. ಆದರೆ ಸಾಮಾಜಿಕ ಕಳಕಳಿ, ಉದಾರ ಮನೋಭಾವನೆ ಇರುವ ಕೆಲವು ಮಹಿಳೆಯರು, ಹುಡುಗಿಯರು ತಮ್ಮ ನೀಳಕೇಶವನ್ನು ದಾನ ಮಾಡಲೂ ಹಿಂದೆ ಮುಂದೆ ನೋಡುವುದಿಲ್ಲ. ಕ್ಯಾನ್ಸರ್‌ನಿಂದ ತಲೆಗೂದಲು ಕಳೆದುಕೊಂಡವರಿಗೆ ಇಂಥವರ ಮನೋಭಾವ ವರದಾನವೇ ಆಗಿದೆ. ತಲೆಗೂದಲು ಬೋಳಾದ ರೋಗಿಗಳಿಗೆ, ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ಕೃತಕ ತಲೆಗೂದಲು, ವಿಗ್‌ಗಳ ಅವಶ್ಯಕತೆ ಇದೆ. ಇಂಥವರಿಗಾಗಿಯೇ ನೀಳವಾದ ಕೇಶ ಇರುವವರು, ಕೇಶದಾನ ಮಾಡಬೇಕಾಗಿದೆ.

ಕ್ಯಾನ್ಸರ್ ಬವಣೆಯಿಂದ ಮುಕ್ತಳಾಗಲು ಮಹಿಳೆಗೆ ಆತ್ಮವಿಶ್ವಾಸ, ಧೈರ್ಯ, ಛಲ ಬೇಕು. ಏನು ಬಂದರೂ ಎದುರಿಸುವೆ ಎನ್ನುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ರೇಡಿಯೇಷನ್, ಕಿಮೋಥೆರಪಿ,

### ‘ಲಾಂಗ್ ಹೇರ್ ಮಾಲು...’

ಮಲೆಯಾಳಂ ನಟಿ ಮಾಳವಿಕಾ ನಾಯರ್ ತನ್ನ ಕೇಶದಾನ ಮಾಡಿದ್ದಾರೆ. ‘ಕೇಶದಾನಂ ಸ್ನೇಹದಾನಂ’ ಅಭಿಯಾನದಡಿ ಕ್ಯಾನ್ಸರ್ ರೋಗಿಗಳಿಗೆ ವಿಗ್ ತಯಾರಿಸಲು ಈ ಕೇಶ ದಾನ ಮಾಡಿದ್ದಾರೆ. ‘‘ಏಪ್ರಿಲ್ 16, 2024ರಂದು ನಾನು ನನ್ನ ಉದ್ದದ ಕೇಶವನ್ನು ದಾನ ಮಾಡಲು ನಿರ್ಧರಿಸಿದೆ. ಬಹಳ ವರ್ಷಗಳಿಂದ ನನಗೆ ಉದ್ದ ಕೂದಲಿದ್ದು, ‘ಲಾಂಗ್ ಹೇರ್ ಮಾಲು’ ಎಂಬ ನಿಕ್ ನೇಮ್ ಅನ್ನೂ ಪಡೆದಿದ್ದೆ. ಮೂರು ವರ್ಷ ಈ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೆ. ಕೊನೆಗೆ ನನ್ನ ಕೇಶವನ್ನು ದಾನ ಮಾಡಿದೆ’’ ಎಂದು ಅವರು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.